**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**CC No. 47/2025.**

| | | | |
|---|---|---|---|
| ಸಾಕ್ಷಿದಾರರ ಹೆಸರು | : ಬಸವರಾಜ ಶಿವಪ್ಪ ತಾರಿಕೊಪ್ಪ | | ***C.W-6*** |
| ತಂದೆಯ ಹೆಸರು | : ಶಿವಪ್ಪ | | ***P.W-8*** |
| ವಯಸ್ಸು | : 34 ವರ್ಷ | | |
| ಉದ್ಯೋಗ | : ಸೀಡ್ಸ ಅಂಗಡಿಯಲ್ಲಿ ಕೆಲಸ | | |
| ವಾಸ | : ಹುಲಿಹಳ್ಳಿ, ತಾಃ ರಾಣೇಬೆನ್ನೂರು. | | |

**ದಿನಾಂಕಃ 01-07-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ಚಾಸಾ-1 ರವರ ಪರಿಚಯ ನನಗೆ ಇರುವುದಿಲ್ಲ. ನಾನು ಯಾವುದೇ ಜಗಳ ನೋಡಿಲ್ಲ ಗಲಾಟೆ ಬಿಡಿಸಲು ಪ್ರಯತ್ನ ಮಾಡಿಲ್ಲ ಈ ಬಗ್ಗೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿ ಅವರು ಪಾಟೀ ಸವಾಲಿಗೆ ಅನುಮತಿಯನ್ನು ಕೋರಿದ್ದು, ಸದರಿ ಮನವಿಯನ್ನು ಅಂಗೀಕರಿಸಲಾಗಿದೆ.)

**ಪಾಟೀ ಸವಾಲುಃ ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ದಿನಾಂಕ 18-10-2024 ರಂದು 11.30 ಗಂಟೆಗೆ ಚಾಸಾ-1 ಇವರು ಅಂಗಡಿಯಲ್ಲಿದ್ದಾಗ ಆರೋಪಿತನು ಮೆಕ್ಕೆಜೋಳ ಬೀಜದ ಸಂಬಂಧ ಮೊಳಕೆ ಬಂದಿಲ್ಲ ಎಂದು ಗಲಾಟೆ ತೆಗೆದು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಊರು ಬಿಟ್ಟು ಓಡಿಸುತ್ತೇವೆ ಎಂದು ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿ ಅಲ್ಲ. ಸದ್ರಿ ಚಾಸಾ-1 ಇವರನ್ನು ಬಲವಂತವಾಗಿ ಮೋಟಾರ್ ಸೈಕಲ್‌ನಲ್ಲಿ ಕರೆದುಕೊಂಡು ಹೋಗಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ನಂತರ ನಾನು ಹೋಗಿ ನೋಡಿ ವಿಚಾರಿಸಿದಾಗ ಆರೋಪಿತರು ಚಾಸಾ-1 ರವರಿಗೆ ಹಲ್ಲೆ ಮಾಡಿದ್ದರು ಆ ಬಗ್ಗೆ ಅವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ

ಬಗ್ಗೆ ದಿನಾಂಕ 18-10-2024 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಅಲ್ಲ. ಷದ್ರಿ ಹೇಳಿಕೆಯನ್ನು ನಿಪಿ-11 ಎಂದು ಗುರುತಿಸಲಾಯಿತು. ಘಟನೆ ಬಗ್ಗೆ ಮಾಹಿತಿ ಇದ್ದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲುಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,**
**ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.**